**ಕರ್ನಾಟಕ ಸರ್ಕಾರ**

**(ವಾಣಿಜ್ಯ ತೆರಿಗೆಗಳ ಇಲಾಖೆ)**

ಸಂಖ್ಯೆ:ವಾತೆಜಂಆ(ಆ)/ವಿ..ಸ&ಸೇ.ತೆ.ಕ–2/
ವಾಹನ/ಸಿಆರ್–05/2023–24

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ) ರವರ ಕಛೇರಿ
ವಿ.ಸ.&.ಸೇ.ತೆ.ಕ–2 ನಂ,642, 2ನೇ ಮಹಡಿ, ಪಯೋನಿರ್ ಪ್ಲಾಜ,
ರಾಜರಾಜೇಶ್ವರಿ ನಗರ, ಬೆಂಗಳೂರು ದಿನಾಂಕ: 14/02/2024

## ಟೆಂಡರ್ ಅಧಿಸೂಚನೆ / ಪರೀಷ್ಕೃತ

ವಿಷಯ:– ದಿನಾಂಕ: 01/04/2024 ರಿಂದ 31/03/2025 ರ ಅವಧಿಗೆ ಈ ವಿಭಾಗಕ್ಕೆ 15 ಮಾಲೀಕರೇ ಚಾಲಕರಾಗಿರುವ ಖಾಸಗಿ ವಾಹನಗಳನ್ನು ಮಾಸಿಕ ಬಾಡಿಗೆ ಮೂಲಕ ಪಡೆದುಕೊಳ್ಳುವ ಬಗ್ಗೆ.

ಉಲ್ಲೇಖ:– 1. ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರ ಪತ್ರ ಸಂಖ್ಯೆ:ವಿ.ಹೆಚ್.ಟಿ/ಸಿ.ಆರ್–20/2023–24 ದಿನಾಂಕ: 27/12/2023.

2. ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರ ಪತ್ರ ಸಂಖ್ಯೆ:ವಿ.ಹೆಚ್.ಟಿ/ಸಿ.ಆರ್–20/2023–24 ದಿನಾಂಕ: 14–02–2024

**********

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ) ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–2 ಬೆಂಗಳೂರು–98 ವಿಭಾಗದ ಕಛೇರಿಗಳ ಉಪಯೋಗಕ್ಕಾಗಿ 15 ಮಾಲೀಕರೇ ಚಾಲಕರಾಗಿರುವ ಖಾಸಗಿ ವಾಹನಗಳನ್ನು ಮಾಸಿಕ ಬಾಡಿಗೆ ಅಧಾರದ ಮೇಲೆ ಪಡೆಯಲು ಉಲ್ಲೇಖ (1) ಮತ್ತು (2)ರ ಪತ್ರದನ್ವಯ ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರು ಅನುಮತಿ ನೀಡಿರುತ್ತಾರೆ. ಆದರಂತೆ ಮಾಲೀಕರೇ ಚಾಲಕರಾಗಿರುವ ವಾಹನ ಚಾಲಕರಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ. ಆಸಕ್ತ ಮಾಲೀಕರೇ ಚಾಲಕರಾಗಿರುವವರು ಮಾತ್ರ ಅರ್ಜಿಯನ್ನು ಸಲ್ಲಿಸುವುದು. ಸರ್ಕಾರಿ ಆದೇಶ ಸಂಖ್ಯೆ:ಶಿಅಸುಇ 96 ಶಿವಾನೀ 2012 ದಿನಾಂಕ: 23/08/2012 ರಲ್ಲಿ ನಿಗಧಿಪಡಿಸಿರುವ ಷರತ್ತೀಗೋಳಪಟ್ಟು ಖಾಸಗಿ ವಾಹನಗಳ ಸೇವೆಯನ್ನು ಪಡೆಯಲಾಗುವುದು.

1. ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರವರ ಪರಿಷ್ಕರಣೆಯ ಸುತ್ತೋಲೆ ಸಂಖ್ಯೆ:ವಿ.ಹೆಚ್.ಟಿ/ಸಿ.ಆರ್–22/2019–20 ದಿನಾಂಕ: 27/04/2022ರಲ್ಲಿ ನಿಗಧಿಪಡಿಸಿರುವಂತೆ ವಾಹನಗಳ ಬಾಡಿಗೆ ದರ ಹವಾ ನಿಯಂತ್ರಣ ರಹಿತ ವಾಹನಗಳಿಗೆ ತಿಂಗಳಿಗೆ ರೂ.35,000–00 ನೀಡಲಾಗುವುದು.
2. 2018 ಮತ್ತು ನಂತರದ ವರ್ಷಗಳಲ್ಲಿ ತಯಾರಾದ ವಾಹನಗಳಾಗಿರಬೇಕು, ಪ್ರತಿ ವಾಹನದ ಗುಣಮಟ್ಟ ಹಾಗೂ ಚಾಲನಾ ಕೌಶಲ್ಯವನ್ನು ಪರೀಶಿಲಿಸಿ ನಂತರವೇ ವಾಹನಗಳನ್ನು ತೆಗೆದುಕೊಳ್ಳಲಾಗುವುದು.
3. ದಿನಾಂಕ: 01/04/2024 ರಿಂದ ಅನ್ವಯವಾಗುವಂತೆ ಈ ಹಿಂದೆ ಸತತವಾಗಿ 5 ವರ್ಷಗಳ ಕಾಲ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಸೇವೆ ಸಲ್ಲಿಸಿರುವ ಯಾವುದೇ ಮಾಲೀಕರೇ ಚಾಲಕರಾಗಿರುವ ಖಾಸಗಿ ವಾಹನಗಳ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
4. ಗುತ್ತೀಗೆ ಅವಧಿ ದಿನಾಂಕ: 01/04/2024 ರಿಂದ 31/03/2025 ರವರೆಗೆ
5. ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 29–02–2024 ಸಂಜೆ 5.00 ಘಂಟೆಯವರೆಗೆ ಆ ನಂತರ ಸಲ್ಲಿಸಿದ ಅರ್ಜಿಗಳನ್ನು ಪುರಸ್ಕರಿಸಲಾಗುವುದಿಲ್ಲ.